ಶ್ರೀ ಕೆ. ಸಿಂಗಾರಿ ಗೌಡ.—ಮಂಡ್ಯ ಜಿಲ್ಲೆಯಲ್ಲಿ ಪರಿಶೀಲನೆ ನಡೆಸಿದ್ದು ಸರಕಾರಕ್ಕೆ ಬಂದಿಪೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಬಹುಶಃ ಇನ್ನೂ ಬಂದಹಾಗೆ ಇಲ್ಲ. ಅಲ್ಲಿ ನೀರು ಸಾಕಷ್ಟು ಇದೆಯೇ ಇಲ್ಲವೇ ಎಂಬ ಪ್ರಶ್ನೆ ಇದೆ. ಲಿಮಿಟೆಡ್ ಪ್ರೊಪೋಗಾಗಿ ನೀರು ಇರುತ್ತದೆಯೇ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡಬೇಕಾಗುತ್ತದೆ.

ಶ್ರೀ ಎಂ. ಬಸವರಾಜು.—ಗೋರೂರು ಅಣೆಕಟ್ಟಿನ ಬಲ ದಂಡೆ ಕಾಲುವೆಯು ಕೃಷ್ಣರಾಜ ನಗರದವರೆಗೆ ಬರುತ್ತದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಮ್ಯಾಪ್ ನೋಡಿದರೆ ಆ ಏರಿಯಾ ಈ ಯೋಜನೆಯಲ್ಲಿ ಇಲ್ಲ. ಬಲ ದಂಡೆ ಸಣ್ಣ ನಾಲೆ ಇರುವುದರಿಂದ ಅಲ್ಲಿಯವರಿಗೆ ನೀರು ಬರುವ ಹಾಗೆ ಕಾಣುವುದಿಲ್ಲ.

Mr. SPEAKER.—The correct information, if not available now, may be sent to the hon'ble Member later.

———

Anecut across Shimsha River

*Q.—145. Sri G. MAGDE GOWDA (Kirugavalu).—

Will the Minister for Public Works be pleased to state :—

(*a*) whether it is a fact that a Plan and an estimate has been prepared for constructing an anecut across Shimsha River near Igglur;

(*b*) if so, the estimated cost and the total area to be irrigated ;

(*c*) when the Scheme would be executed ?

A.—Sri VEERENDRA PATIL (Minister for Public Works).—

(*a*) Yes.

(*b*) Rs. 26 lakhs and about 1,400 acres.

(*c*) The scheme was dropped in view of the large extent of submersion.

ಶ್ರೀ ಜಿ. ಮಾದೇಗೌಡ.—1964-65 ರಲ್ಲಿ ಬಜೆಟ್ ಅಧಿವೇಶನದಲ್ಲಿ ಇದೇ ಒಂದು ಪ್ರಶ್ನೆ ಹಾಕಿದ್ದೆ. ಆ ಸಂದರ್ಭದಲ್ಲಿ ಈ ಶಿಂಶಾ ಅಣೆಕಟ್ಟಿನಿಂದ ಹತ್ತು ಸಾವಿರ ಎಕರೆ ನೀರಾವರಿಯಾಗುತ್ತದೆ ಅದಕ್ಕೆ ನಲವತ್ತು ಸಾವಿರ ಖರ್ಚಾಗುತ್ತದೆ ಸಧ್ಯದಲ್ಲೇ ಈ ಯೋಜನೆ ತೆಗೆದುಕೊಳ್ಳುತ್ತೇವೆ ಎಂದು ಆಗ್ಗೆ ಉಪ್ಪಣೆ ಕೊಡಿಸಿದ್ದಿರಿ. ಆದರೆ ಈಗ ಈ ಯೋಜನೆಯನ್ನು ಕೈ ಬಿಟ್ಟಿದ್ದೀರಿ. ಇದರ ಸಮಾಚಾರ ಏನು ?

ಶ್ರೀ ವೀರೇಂದ್ರ ಪಾಟೀಲ್.—ಹತ್ತು ಸಾವಿರ ಎಕರೆ ನೀರಾವರಿಯಾಗುತ್ತದೆ, ನಲವತ್ತು ಸಾವಿರ ಖರ್ಚಾಗುತ್ತದೆ ಎಂದು ಆ ರೀತಿ ಹೇಳಿರಲಿಕ್ಕಿಲ್ಲ. ಈ ಯೋಜನೆ ಫೀಜಿಬಲ್ ಇಲ್ಲ ಎಂದು ಕಂಡು ಬಂದಿದೆ. ಈ ಯೋಜನೆಯಿಂದ ಒಟ್ಟು 1,400 ಎಕರೆ ನೀರಾವರಿ ಅನುಕೂಲವಾಗುತ್ತದೆ ಹಾಗೂ ಡೆವಲಪ್ ಆಗಿರುವ 800 ಎಕರೆ ಮುಳುಗಡೆಯಾಗುತ್ತದೆ. ಇದು ಫೀಜಿಬಲ್ ಇಲ್ಲ ಎಂದು ಕೈ ಬಿಟ್ಟಿದ್ದೇವೆ. ಶಿಂಶಾ ಯೋಜನೆಯನ್ನು ಸಂಪೂರ್ಣವಾಗಿ ಕೈಬಿಟ್ಟಿದ್ದೇವೆ ಎಂದು ಹೇಳಿಲ್ಲ. ಸೀಪೇಜ್ ವಾಟರ್ ಉಪಯೋಗಿಸಿಕೊಳ್ಳುವ ಆಲ್ಟರ್‌ನೇಟೀವ್ ಯೋಜನೆಮಾಡಿದೆ. ಇನ್ನೊಂದು ಯೋಜನೆ ಮಾಡಿದೆ. ಇದರಿಂದ 3,800 ಎಕರೆ ನೀರಾವರಿ ಅನುಕೂಲವಾಗುತ್ತದೆ. ಪುದ್ದೂರು, ಮುಳವಳ್ಳಿ, ಚನ್ನಪಟ್ಟಣ ತಾಲ್ಲೂಕುಗಳಿಗೆ ಅನುಕೂಲವಾಗುತ್ತದೆ. ಇದಕ್ಕೆ 55 ಲಕ್ಷ ರೂಪಾಯಿ ಖರ್ಚಾಗುತ್ತದೆ. ಇದನ್ನು ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ಮಾದೇಗೌಡ.—1947 ರಲ್ಲಿ ಮದ್ದೂರ ಹತ್ತಿರ ಒಂದು ಯೋಜನೆಯ ಎಸ್ಟಿಮೇಟ್ ಮಾಡಿದ್ದರು. ಬಹಳ ಜಮೀನು ಮುಳುಗಡೆಯಾಗುತ್ತದೆಂದು ಅದನ್ನು ಕೈ ಬಿಟ್ಟರು. ಇಗಳೂರು ಹತ್ತಿರ ಯೋಜನೆಯ ಸರ್ವೇ ಕೆಲಸ ನಡೆದಿದೆ. ಹತ್ತು ಸಾವಿರ ಎಕರೆ ನೀರಾವರಿಯಾಗುತ್ತದೆ ಮತ್ತು ಇದಕ್ಕೆ ನಾಲ್ಕತ್ತು ಲಕ್ಷ ರೂಪಾಯಿ ಖರ್ಚಾಗುತ್ತದೆ ಎಂದು ಅಂದಾಜು ಇದೆ. ಈ ಯೋಜನೆ ಮಂಜೂರು ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—40 ಲಕ್ಷ ಖರ್ಚಿನಲ್ಲಿ 10 ಸಾವಿರ ಎಕರೆ ನೀರಾವರಿಯಾಗುವುದಾದರೆ ಇದು ಒಳ್ಳೆಯ ಯೋಜನೆ ಆಗುತ್ತದೆ. ಇದಕ್ಕೂ ಒಳ್ಳೆಯದು ಬೇರೆ ಯಾವುದೂ ಆಗುವುದಿಲ್ಲ. ನನ್ನ ಮುಂದಿರುವ ಅಂಕಿ ಅಂಶಗಳನ್ನು ನೋಡಿದರೆ ಅವರು ಹೇಳುವಹಾಗೆ ಇರುವುದಿಲ್ಲ. 26 ಲಕ್ಷ ರೂಪಾಯಿ ಖರ್ಚಾಗಿ 1,400 ಎಕರೆ ನೀರಾವರಿಯಾಗುತ್ತದೆ ಎಂದು ಇದೆ. ಇದರಲ್ಲಿ 800 ಎಕರೆ ಒಳ್ಳೇ ಜಮೀನು ಮುಳುಗಡೆ ಮಾಡಬೇಕಾಗುತ್ತದೆ. ಆದುದರಿಂದ ಸೀಪೇಜ್ ವಾಟರ್ ಉಪಯೋಗ ಮಾಡಿಕೊಳ್ಳಬೇಕೆಂದು ತೀರ್ಥಮಾರನಹಳ್ಳಿ ಯೋಜನೆ ಮಾಡಿದರು. ಮಾನ್ಯ ಸದಸ್ಯರು ಹೇಳುವ ಹಾಗೆ 40 ಲಕ್ಷ ಖರ್ಚು ಮತ್ತು 10 ಸಾವಿರ ಎಕರೆ ನೀರಾವರಿಯಾಗುವ ಯಾವ ಯೋಜನೆ ಇದ್ದರೂ ಅದನ್ನು ತೆಗೆದುಕೊಳ್ಳುತ್ತೇವೆ.

Bridge across the Vedavathi River

*Q.—280. Sri B. L. GOWDA (Challakere).—

Will the Minister for Public Works be pleased to state :—

(*a*) whether plans and estimates have been prepared for the construction of the bridge across Vedavatht river between Jajur and Nagagondanahalli in Challakere Taluk ;

(*b*) whether the same has been sanctioned ?

A.—Sri VEERENDRA PATIL (Minister for Public Works).—

(*a*) The detailed plans and estimates are under finalisation in the Department.

(*b*) Does not arise in view of reply to clause (*a*) of the question.

ಶ್ರೀ ಬಿ. ಎಲ್. ಗೌಡ.—ಜಾಜೂರು ಮತ್ತು ನಾಗಗೊಂಡನಹಳ್ಳಿಗಳ ಮಧ್ಯೆ ಒಂದು ಸೇತುವೆಯನ್ನು ಕಟ್ಟಬೇಕೆಂದು 10-12 ವರ್ಷಗಳಿಂದ ಕೇಳಿಕೊಳ್ಳುತ್ತಿದ್ದೇವೆ. ಯಾವಾಗ ಕೇಳಿದರೂ ಅಂದಾಜು ತಯಾರಾಗುತ್ತಿದೆ ಎಂದು ಹೇಳುತ್ತಾರೆ. ಇದನ್ನು ಎಷ್ಟು ಜಾಗ್ರತೆ ತಯಾರು ಮಾಡುತ್ತೀರಿ ಸ್ವಾಮಿ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರಿಗೆ ಗೊತ್ತಿದೆಯೋ ಇಲ್ಲವೋ ತಿಳಿಯದು. ಬಹುಶಃ ನಾನು ಹೇಳಿದರೆ ಸಂತೋಷಪಾಗಬಹುದು. ಇದರ ಮಹತ್ವವನ್ನು ಅರಿತು ನಾನು ಕೂಡ ಆ ಕಡೆ ಹೋಗಿ ಸ್ಥಳ ಪರಿಶೀಲನೆ ಮಾಡಿ ಕೇಂದ್ರ ಸರ್ಕಾರಕ್ಕೆ ಬರೆದು ಸೆಂಟ್ರಲ್ ರೋಡ್ ಫಂಡಿನಲ್ಲಿ ಈ ಕಾರ್ಯಕ್ರಮ ಹಾಕಿ ಅವರಿಂದ ಮಂಜೂರಾತಿ ಪಡೆದಿದ್ದೇನೆ. ಇದಕ್ಕೆ ನುಮಾರು ಎರಡು ಲಕ್ಷ ರೂಪಾಯಿ ಖರ್ಚಾಗುತ್ತದೆ. ಅದಕ್ಕೆ ಡೀಟೇಲ್ಡ್ ಎಸ್ಟಿಮೇಟುಗಳು ಮತ್ತು ಪ್ಲಾನು ನಮ್ಮ ಹತ್ತಿರ ಬಂದರೆ ಅದಕ್ಕೆ ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಕೊಡಬೇಕು ಎಂದು ಹೇಳಿದ್ದಾರೆ. ನಮ್ಮ ಸೂಪರಿಂಟೆಂಡಿಂಗ್ ಇಂಜಿನಿಯರು ಇದನ್ನು ತಯಾರು ಮಾಡುತ್ತಿದ್ದಾರೆ. ಬಂದ ತಕ್ಷಣ ಮಂಜೂರು ಮಾಡುತ್ತೇವೆ.

ಶ್ರೀ ಬಿ. ಎಲ್. ಗೌಡ.—ಇವು ಯಾವಾಗ ಸಿದ್ಧವಾಗುತ್ತವೆ ಸ್ವಾಮಿ ?

ಶ್ರೀ ವೀರೇಂದ್ರ ಪಾಟೀಲ್.—ಸೆಂಟ್ರಲ್ ರೋಡ್ ಫಂಡಿನಿಂದ ಮಾಡುವುದಕ್ಕೆ ಕೇಂದ್ರ ಸರ್ಕಾರದವರು ಈಗಾಗಲೇ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಪ್ರೋಗ್ರಾಂ ನಮ್ಮ ಹತ್ತಿರ ಬಂದಕೂಡಲೇ ನಾವೇ ಮಾಡುತ್ತೇವೆ. ಅದನ್ನು ಕೇಂದ್ರ ಸರ್ಕಾರಕ್ಕೆ ಕಳಿಸುವ ಅವಶ್ಯಕತೆ ಇಲ್ಲ. ಬೇಕಾದರೆ, ಮಾನ್ಯ ಸದಸ್ಯರಿಗೆ ಸಮಾಧಾನವಾಗುತ್ತಿದ್ದರೆ, ಇವತ್ತೇ ನಾನು ಮತ್ತೊಮ್ಮೆ ಆದಷ್ಟು ಜಾಗ್ರತೆ ಕಳಿಸಿಕೊಡಿ ಎಂದು ಬರೆಯುತ್ತೇನೆ.